KASM620001662020

Presented on : 07-02-2020
Registered on : 07-02-2020
Decided on : 04-08-2026
Duration : 6 years, 5 months, 26 days

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.

: **ಉಪಸ್ಥಿತರು**:

ಶ್ರೀ **ಮಾದೇಶ ಎಂ.ವಿ.,** ಬಿ.ಕಾಂ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.

ದಿನಾಂಕಃ 04 ನೇ ಆಗಸ್ಟ್ 2026

ಸಿ.ಸಿ. ಸಂಖ್ಯೆ 52/2020

ಪಿರ್ಯಾದಿದಾರರುಃ

ಶ್ರೀ ವರುಣ್ ಡಿ.ಎಲ್. ಬಿನ್ ಲಕ್ಷ್ಮೀಕಾಂತ ಡಿ.ವೈ.
ವಯಸ್ಸು ಸುಮಾರು 30 ವರ್ಷ,
ಬಟ್ಟೆಮತ್ತು ಮೊಬೈಲ್ ವ್ಯಾಪಾರಿ,
ಶ್ರೀ ಟಾಕೀಸ್ ಎದುರು, ಸಾಗರ ಟೌನ್,
ಶಿವಮೊಗ್ಗ ಜಿಲ್ಲೆ.

(ಶ್ರೀ ಬಿ.ಜಿ.ಎಸ್.,-ವಕೀಲರು)

ವಿರುದ್ಧ

ಆರೋಪಿತರು: 1. ವೀರೇಂದ್ರ ಸಿ. ಬಿನ್ ಚಂದ್ರಣ್ಣ,

ಕಂಟ್ರ್ರಾಕ್ಟರ್, ವಯಸ್ಸು 38 ವರ್ಷ,
ವಾಸಃ ಕರ್ಕಿಕೊಪ್ಪ, ಸಾಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

2. ಅಣ್ಣಪ್ಪ ಬಿನ್ ಗಣಪತಿ ಕೆ.ಜಿ.,
ವಾಸಃ 14, ಕೆಳಗಿನಗೋಳುಗೋಡು,
ಶಿರವಂತೆ ಅಂಚೆ, ಸಾಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ. ಮೊಬೈಲ್ ನಂ. 8971029522.

(1 ನೇ ಆರೋಪಿಯ ಪರವಾಗಿ ಶ್ರೀ ಎಂ.ಆರ್.ಎಸ್.,ವಕೀಲರು)
(2 ನೇ ಆರೋಪಿಯ ಪರವಾಗಿ ಶ್ರೀ ಸಿ.ಎಲ್.ವಿ.,ವಕೀಲರು)

ತೀರ್ಪು

ಆರೋಪಿತರು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರ ಅಡಿಯಲ್ಲಿ ಅಪರಾಧವೆಸಗಿದ್ದಾರೆಂದು, ಪ್ರಸ್ತುತ ಖಾಸಗಿ ದೂರನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 200 ರಡಿಯಲ್ಲಿ ಪಿರ್ಯಾದುದಾರರು ಸಲ್ಲಿಸಿದ್ದಾರೆ.

2. ಪಿರ್ಯಾದಿಯ ದೂರಿನ ಸಾರಾಂಶವೇನೆಂದರೆ, 1 ನೇ ಆರೋಪಿತನು ಪಿರ್ಯಾದುದಾರರಿಗೆ ಪರಿಚಯಸ್ಥನಾಗಿದ್ದು, 2019 ನವೆಂಬರ್ ತಿಂಗಳ ಮೊದಲ ವಾರದಲ್ಲಿ ತನ್ನ ಆರ್ಥಿಕ ಅಡಚಣೆಯನ್ನು ನಿವಾರಿಸುವಕೊಳ್ಳುವ ಸಲುವಾಗಿ 5,20,000/- ರೂ. ಗಳನ್ನು ಕೈಗಡ ಸಾಲವಾಗಿ ಪಡೆದುಕೊಂಡು, ಸದರಿ ಹಣವನ್ನು ಒಂದು ತಿಂಗಳ ಒಳಗೆ ಮರುಪಾವತಿ ಮಾಡುವುದಾಗಿ, ಮಾತು

ಕೊಟ್ಟಿರುತ್ತಾರೆ. ಆದರೆ, ಸದರಿ ಹಣವನ್ನು 1 ನೇ ಆರೋಪಿತನು ನಿಗಧಿತ ಕಾಲಾವಧಿಯಲ್ಲಿ ಮರುಪಾವತಿ ಮಾಡದ ಕಾರಣ, ಆ ಹಣವನ್ನು ವಾಪಸ್ಸು ನೀಡುವಂತೆ ಪಿರ್ಯಾದುದಾರರು 1 ನೇ ಆರೋಪಿತನನ್ನು ಕೇಳಿದಾಗ, ದಿನಾಂಕಃ 07.01.2020 ರಂದು ನಗದಾಗುವಂತೆ 1 ನೇ ಆರೋಪಿತನು 5,20,000/- ರೂ.ಗಳು ಎಂದು ಬರೆದು 2 ನೇ ಆರೋಪಿತನು ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್, ಸಾಗರ ಶಾಖೆಯ ಚೆಕ್ ನಂ.985454 ನ್ನು ಪಿರ್ಯಾದುದಾರರಿಗೆ ಕೊಟ್ಟಿರುತ್ತಾರೆ. 1 ನೇ ಆರೋಪಿತನ ಮಾತಿನಂತೆ ಸದರಿ ಚೆಕ್ಕನ್ನು ಪಿರ್ಯಾದುದಾರರು ತನ್ನ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್, ಸಾಗರ ಶಾಖೆಗೆ ನಗಧೀಕರಣಕ್ಕಾಗಿ ಸಲ್ಲಿಸಿದಾಗ, ದಿನಾಂಕಃ 07.01.2020 ರಂದು 1 ನೇ ಆರೋಪಿತನು ನೀಡಿದ ಚೆಕ್ಕು ಆರೋಪಿತನ ಸಹಿಯು ವ್ಯತ್ಯಾಸದಿಂದ ಕೂಡಿದೆ ಎಂಬ ಹಿಂಬರಹದೊಂದಿಗೆ ಅನಾಧರಣಗೊಂಡಿರುತ್ತದೆ. ತದನಂತರ, ಪಿರ್ಯಾದಿಯು ದಿನಾಂಕಃ 10.01.2020 ರಂದು 1 ಮತ್ತು 2 ನೇ ಆರೋಪಿತರಿಗೆ ನೋಂದಾಯಿತ ಅಂಚೆ ಮೂಲಕ ತಮ್ಮ ವಕೀಲರಿಂದ 1 ನೇ ಆರೋಪಿತನು ನೀಡಿದ 2 ನೇ ಆರೋಪಿತನ ಚೆಕ್ಕು ಅನಾಧರಣಗೊಂಡಿದ್ದು, ಚೆಕ್ಕಿನ ಹಣವನ್ನು ಹದಿನೈದು ದಿನಗಳೊಳಗಾಗಿ ಮರುಪಾವತಿ ಮಾಡುವಂತೆ ಸೂಚಿಸಿ, ನೋಟೀಸ್ ನ್ನು ನೀಡಿರುತ್ತಾರೆ. ಸದರಿ ನೋಟೀಸು ದಿನಾಂಕಃ 14.01.2020 ರಂದು ಆರೋಪಿತರಿಗೆ ಖುದ್ದು

ಜಾರಿಯಾಗಿದ್ದು, ಸದರಿ ನೋಟೀಸಿಗೆ ಆರೋಪಿತರು ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಮತ್ತು ಸದರಿ 1 ನೇ ಆರೋಪಿತನು ಪಿರ್ಯಾದಿಯಿಂದ ಪಡೆದ 5,20,000/- ರೂ. ಗಳನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, 1 ನೇ ಆರೋಪಿತನು 2 ನೇ ಆರೋಪಿತನ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿದ್ದಲ್ಲದೇ, 2 ನೇ ಆರೋಪಿತನ ಚೆಕ್ಕಿಗೆ 1 ನೇ ಆರೋಪಿತನು ತನ್ನ ಸಹಿಯನ್ನು ಮಾಡಿ ಕೊಟ್ಟು, ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ಎಸಗಿರುವುದರಿಂದ, ಆರೋತರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಪ್ರಸ್ತುತ ದೂರನ್ನು ಪಿರ್ಯಾದುದಾರರು ಸಲ್ಲಿಸಿದ್ದಾರೆ.

3. ನ್ಯಾಯಾಲಯವು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಅಡಿಯಲ್ಲಿ ಆರೋಪಿತರ ವಿರುದ್ಧ ಆರೋಪಿಸಿರುವ ಅಪರಾಧಕ್ಕೆ ಸಂಜ್ಞಾನವನ್ನು ತೆಗೆದುಕೊಂಡ ನಂತರ, ಆರೋಪಿತರಿಗೆ ಸಮನ್ಸನ್ನು ನೀಡಿರುತ್ತದೆ. ನಂತರ,ಸಮನ್ಸ್ ಜಾರಿಯಾದ ನಂತರ ಆರೋಪಿತರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ, ಜಾಮೀನನ್ನು ಪಡೆದುಕೊಂಡಿರುತ್ತಾರೆ. ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ. 138 ರ ಅಡಿಯಲ್ಲಿ ಆರೋಪಿಸಿರುವ ಅಪರಾಧಕ್ಕಾಗಿ ಆರೋಪಿತರಿಗೆ ತಪ್ಪಿನ ವಾದವನ್ನು ಕನ್ನಡದಲ್ಲಿ ಓದಿ ಹೇಳಲಾಯಿತು. ಆರೋಪಿತರು ಸದರಿ ತಪ್ಪಿನ ವಾದವನ್ನು ನಿರಾಕರಿಸಿ, ವಿಚಾರಣೆ

ಆಗಲಿ ಎಂದು ಕೇಳಿಕೊಂಡ ಮೇರೆಗೆ ಪ್ರಕರಣವನ್ನು ವಿಚಾರಣೆಗೆ ಮುಂದೂಡಲಾಯಿತು.

4. ಪಿರ್ಯಾಧಿಯು ತನ್ನ ದೂರಿನಲ್ಲಿ ಹೇಳಿರುವ ಸಂಗತಿಗಳನ್ನು ನಿರೂಪಿಸುವ ಸಲುವಾಗಿ, ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಗುರಿಪಡಿಸಿಕೊಂಡು, ತಮ್ಮ ಮುಖ್ಯ ವಿಚಾರಣೆಯ ಸಲುವಾಗಿ ಶಪಥ ಪತ್ರವನ್ನು ಸಲ್ಲಿಸಿ, ಸದರಿ ಶಪಥ ಪತ್ರದಲ್ಲಿ, ದೂರಿನಲ್ಲಿ ಹೇಳಿರುವ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ. ಪಿ.ಡಬ್ಲ್ಯೂ.1 ರವರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ, ನಿ.ಪಿ.1 ರಿಂದ ನಿ.ಪಿ.7 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ. ಸದರಿ ಪಿರ್ಯಾದುದಾರರು ತನ್ನ ಪರವಾಗಿ ಇತರೆ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ. ಪಿರ್ಯಾದುದಾರರ ಸಾಕ್ಷ್ಯ ಮುಗಿದ ನಂತರ, ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಅಭಿಲೇಖಿಸಲಾಯಿತು. ಸದರಿ ಹೇಳಿಕೆಯಲ್ಲಿನ ತಮ್ಮ ವಿರುದ್ಧ ಪಿ.ಡಬ್ಲ್ಯೂ-1 ರವರು ನೀಡಿದ ಎಲ್ಲಾ ಹೇಳಿಕೆಗಳನ್ನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಆರೋಪಿತರು ಅನುಕ್ರಮವಾಗಿ ತಮ್ಮನ್ನು ತಾವು ಡಿ.ಡಬ್ಲ್ಯೂ-1 ಮತ್ತು 2 ಎಂದು ವಿಚಾರಣೆಗೆ ಗುರಿಪಡಿಸಿಕೊಂಡಿರುತ್ತಾರೆ. ಆದರೆ, ಸದರಿ ಆರೋಪಿತರು ತಮ್ಮ ಪರವಾಗಿ ಯಾವುದೇ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿರುವುದಿಲ್ಲ.

5. ತದನಂತರ, ಸಾಕಷ್ಟು ಕಾಲಾವಕಾಶವನ್ನು ನೀಡಿದ್ದಾಗ್ಯೂ ಸಹ ಉಭಯ ಪಕ್ಷಗಾರರ ತಮ್ಮ ವಾದಗಳನ್ನು ಮಂಡನೆ ಮಾಡದ ಕಾರಣ, ಉಭಯ ಪಕ್ಷಗಾರರಿಗೆ ಲಿಖಿತ ವಾದವನ್ನು ದಿನಾಂಕಃ 25.07.2026 ರ ಒಳಗಾಗಿ ಸಲ್ಲಿಸುವಂತೆ ನಿರ್ದೇಶನ ನೀಡಿ, ಪ್ರಕರಣವನ್ನು ತೀರ್ಪಿಗಾಗಿ ಮುಂದೂಡಲಾಯಿತು. ನ್ಯಾಯಾಲಯದ ಪರಿಗಣನೆಗೆ ಕಡತಗಳಲ್ಲಿನ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಯಿತು. ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

ಅಂಶಗಳು

1. 1 ನೇ ಆರೋಪಿತನು ಫಿರ್ಯಾದಿಗೆ ಕಾನೂನಾತ್ಮಕವಾಗಿ ಪಾವತಿಸಬೇಕಾದ ಹಣಕ್ಕಾಗಿ, 2 ನೇ ಆರೋಪಿತನು ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್, ಸಾಗರ ಶಾಖೆಯ ಚೆಕ್ ನಂಬರ್ 985454 ಅನ್ನು ದಿನಾಂಕಃ 07.01.2020 ರಂದು ನಗದಾಗುವಂತೆ ಮುಂದಿನ ದಿನಾಂಕವನ್ನು ನಮೂದಿಸಿ 5,20,000/-ರೂ. ಗಳು ಎಂದು ಬರೆದು ಸದರಿ ಚೆಕ್ಕಿಗೆ 1 ನೇ ಆರೋಪಿತನು 2 ನೇ ಆರೋಪಿತನ ಸಹಿಯನ್ನು ಮಾಡಿ, ಪಿರ್ಯಾದಿಯ ಪರವಾಗಿ ನೀಡಿರುತ್ತಾನೆಯೇ?

2. ಸದರಿ ಚೆಕ್ಕನ್ನು ಫಿರ್ಯಾದಿಯು ತನ್ನ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್, ಸಾಗರ ಶಾಖೆಗೆ ನಗಧೀಕರಿಸಿಕೊಳ್ಳಲು ಹಾಜರುಪಡಿಸಿದಾಗ, ಸದರಿ ಚೆಕ್ಕು ಆರೋಪಿತನ ಸಹಿಯು ತಾಳೆಯಾಗುವುದಿಲ್ಲ/ವ್ಯತ್ಯಾಸದಿಂದ ಕೂಡಿದೆ ಎಂಬ

ಕಾರಣಕ್ಕಾಗಿ ದಿನಾಂಕಃ 07.01.2020 ರಂದು ಅನಾಧರಣಗೊಂಡಿದೆಯೇ?

3. ಫಿರ್ಯಾದಿಯ ನಿಗಧಿತ ಕಾಲಾವಧಿಯಲ್ಲಿ ಆರೋಪಿತರಿಗೆ ನೋಟೀಸನ್ನು ನೀಡಿ, ಚೆಕ್ಕಿನಲ್ಲಿರುವ ಹಣವನ್ನು ಪಾವತಿಸುವಂತೆ ಕೇಳಿಕೊಂಡಿದ್ದಾರೆಯೇ?

4. ಸದರಿ ನೋಟೀಸು ಅನ್ನು ಆರೋಪಿತರಿಗೆ ನೀಡಿದ ನಂತರವೂ ಸಹ, ಆರೋಪಿತರು ಚೆಕ್ಕಿನ ಹಣವನ್ನು ನಿಗದಿತ ಅವಧಿಯಲ್ಲಿ ಪಾವತಿಸದೆ ಇರುವ ಕಾರಣ, ಆರೋಪಿತರು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆಯೇ?

5. ಯಾವ ಆದೇಶ?

6. ಆರೋಪಿತರ ಪರ ವಕೀಲರು ದಿನಾಂಕಃ 28.07.2026 ರಂದು ಮುಂಗಡ ಅರ್ಜಿಯನ್ನು ಸಲ್ಲಿಸಿ, ತನ್ನ ಪರವಾಗಿ ಲಿಖಿತ ವಾದವನ್ನು ಸಲ್ಲಿಸಿದ್ದಾರೆ. ಸದರಿ ಪಿರ್ಯಾದಿ ಪರ ವಕೀಲರು ತಮ್ಮ ಪರ ಲಿಖಿತ ವಾದವನ್ನು ಸಲ್ಲಿಸಿರುವುದಿಲ್ಲ ಮತ್ತು ಮೌಖಿಕ ವಾದವನ್ನು ಸಹ ಮಂಡಿಸಿರುವುದಿಲ್ಲ. ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿದ ನಂತರ, ಮೇಲಿನ ಅಂಶಗಳಿಗೆ ಉತ್ತರವು ಈ ಕೆಳಕಂಡಂತೆ ಇರುತ್ತದೆ.

ಅಂಶ. 1 : ***ನಕಾರಾತ್ಮಕವಾಗಿ***

ಅಂಶ. 2 : ***ಸಕಾರಾತ್ಮಕವಾಗಿ***

ಅಂಶ. 3 : ***ಸಕಾರಾತ್ಮಕವಾಗಿ***

ಅಂಶ. 4 : ***ನಕಾರಾತ್ಮಕವಾಗಿ***

ಅಂಶ.5 : **ಈ ಕೆಳಕಂಡ ಕಾರಣಗಳಿಂದಾಗಿ ಅಂತಿಮ ಆದೇಶದಂತೆ –**

ಕಾ ರ ಣ ಗ ಳು

7. **ಅಂಶ–1 ರಿಂದ 4:–** ಈ ನಾಲ್ಕು ಅಂಶಗಳ ಮೇಲಿನ ಚರ್ಚೆಯು ಒಂದರ ಮೇಲೆ ಇನ್ನೊಂದು ಅವಲಂಬಿತವಾಗಿರುವುದರಿಂದ ಮತ್ತು ಪ್ರಕರಣದ ವಸ್ತುಸ್ಥಿತಿಗಳ ಮತ್ತು ವಾಕ್ಯಗಳ ಪುನರಾವರ್ತನೆಯನ್ನು ತಪ್ಪಿಸುವುದಕ್ಕಾಗಿ, ಈ ಎಲ್ಲಾ ಅಂಶಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

1 ನೇ ಆರೋಪಿತನು ಪಿರ್ಯಾದುದಾರನಿಗೆ ಪರಿಚಯಸ್ಥನಾಗಿದ್ದು, ಸದರಿ 1 ನೇ ಆರೋಪಿತನು 5,20,000/– ರೂ. ಗಳನ್ನು 2019 ನೇ ಸಾಲಿನ ನವೆಂಬರ್ ತಿಂಗಳ ಮೊದಲ ವಾರದಲ್ಲಿ 5,20,000/– ರೂ.ಗಳನ್ನು ತನ್ನ ಆರ್ಥಿಕ ಅಡಚಣೆಯನ್ನು ನಿವಾರಿಸಿಕೊಳ್ಳಲು ಕೈಗಡ ಸಾಲವಾಗಿ ಪಡೆದುಕೊಂಡು, ಆ ಹಣವನ್ನು ಒಂದು ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡು ನಂತರ, ಆ ಹಣದ ಮರುಪಾವತಿಗಾಗಿ ದಿನಾಂಕಃ 07.01.2020 ರಂದು ನಗದಾಗುವಂತೆ 2 ನೇ ಆರೋಪಿತನ ಕರ್ನಾಟಕ ಬ್ಯಾಂಕ್, ಸಾಗರ ಶಾಖೆಯ ಚೆಕ್ ನಂ.985454 ನ್ನು 5,20,000/– ರೂ.ಗಳೆಂದು

ನಮೂದಿಸಿ, 2 ನೇ ಆರೋಪಿತನ ಸಹಿಯನ್ನು1 ನೇ ಆರೋಪಿತನೇ ಸ್ವತಃ ಮಾಡಿ, ಪಿರ್ಯಾದುದಾರರಿಗೆ ನೀಡಿರುತ್ತಾರೆ. ಸದರಿ ಚೆಕ್ ನ್ನು ನಗಧೀಕರಣಕ್ಕಾಗಿ ಹಾಜರುಪಡಿಸಿದಾಗ, ಸದರಿ ಚೆಕ್ಕು ಆರೋಪಿತನ ಸಹಿಯು ತಾಳೆಯಾಗುವುದಿಲ್ಲ ಎಂಬ ಕಾರಣಕ್ಕಾಗಿ ಅನಾಧರಣಗೊಂಡಿದ್ದು, ಬ್ಯಾಂಕಿನ ಅಧಿಕಾರಿಗಳು ದಿನಾಂಕಃ 07.01.2020 ರಂದು ಹಿಂಬರಹವನ್ನು ನೀಡಿದ್ದು, ನಂತರ ಆ ಹಣವನ್ನು ಹದಿನೈದ ದಿನಗಳೊಳಗಾಗಿ ಮರುಪಾವತಿಸುವಂತೆ ಒತ್ತಾಯಿಸಿ, ಪಿರ್ಯಾದಿಯು 1 ಮತ್ತು 2 ನೇ ಆರೋಪಿತರಿಗೆ ನೋಟೀಸ್ ನ್ನು ನೀಡಿದರೂ ಸಹ, ಆರೋಪಿತರು ಸದರಿ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂಬುದಾಗಿ ತನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಕೆ ನೀಡಿರುತ್ತಾರೆ.

8. ಆದರೆ, ದೂರಿನ ಎಲ್ಲಾ ಸಂಗತಿಗಳನ್ನು ಮತ್ತು ನಿ.ಪಿ.1 ರಿಂದ 7 ನೇ ದಾಖಲೆಗಳನ್ನು ಆರೋಪಿತರು ನಿರ್ದಿಷ್ಟವಾಗಿ ಅಲ್ಲಗಳೆದಿದ್ದಾರೆ. 1 ಮತ್ತು 2 ನೇ ಆರೋಪಿತರ ಪರ ವಕೀಲರು ತಮ್ಮ ಲಿಖಿತ ವಾದವನ್ನು ಸಲ್ಲಿಸಿದ್ದು, ಸದರಿ ಲಿಖಿತ ವಾದದಲ್ಲಿ 1 ನೇ ಆರೋಪಿತನಿಗೆ 5,20,000/- ರೂ.ಗಳನ್ನು ನೀಡುವಷ್ಟು ಆರ್ಥಿಕ ಸಾಮರ್ಥ್ಯವು ಪಿರ್ಯಾದಿಗೆ ಇರುವುದಿಲ್ಲ. ಸದರಿ ಪಿರ್ಯಾದುದಾರರು ಹಾಜರುಪಡಿಸಿರುವ ನಿ.ಪಿ.1 ರ 2 ನೇ ಆರೋಪಿತನ ಚೆಕ್ಕು ಸಹಿ ವ್ಯತ್ಯಾಸದಿಂದ ಕೂಡಿದೆ ಎಂಬ ಕಾರಣಕ್ಕಾಗಿ ಅನಾಧರಣಗೊಂಡಿರುತ್ತದೆ. ಪಿ.ಡಬ್ಲ್ಯೂ-1 ರವರ

ಪಾಟೀ ಸವಾಲಿನ ಮೂಲಕ ಆರೋಪಿತರು ಪಿರ್ಯಾದಿಯ ಪರವಾಗಿ ಇರುವಂತಹ ಪೂರ್ವ ಭಾವನೆಯನ್ನು ಸೂಕ್ತ ರೀತಿಯಲ್ಲಿ ಖಂಡಿಸಿರುತ್ತಾರೆ.

9. ಪಿರ್ಯಾದುದಾರರ ಆರ್ಥಿಕ ಸಾಮರ್ಥ್ಯವನ್ನು ಆರೋಪಿತರು ನಿರ್ದಿಷ್ಟವಾಗಿ ಪ್ರಶ್ನಿಸಿದ್ದರೂ ಸಹ, ತಮ್ಮ ಆರ್ಥಿಕ ಸಾಮರ್ಥ್ಯವನ್ನು ಸಾಬೀತುಪಡಿಸಲು ಪಿರ್ಯಾದುದಾರರು ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಆದಕಾರಣ, ಅಲ್ಲದೇ, ಆರೋಪಿತರನ್ನು ಪಿರ್ಯಾದಿ ಪರ ವಕೀಲರು ಪಾಟೀ ಸವಾಲಿಗೆ ಸಾಕಷ್ಟು ಕಾಲಾವಕಾಶವನ್ನು ನೀಡಿದ ನಂತರವೂ ಸಹ, ಪಾಟೀ ಸವಾಲಿಗೆ ಒಳಪಡಿಸದೇ ಇರುವುದರಿಂದ, ಆರೋಪಿತರು ಯಾವುದೇ ತಪ್ಪನ್ನು ಮಾಡಿರುವುದಿಲ್ಲ. ಆದ್ದರಿಂದ, ಆರೋಪಿತನ್ನು ಬಿಡುಗಡೆ ಮಾಡಬೇಕೆಂದು ಸಾಧನೆ ಮಾಡಿರುತ್ತಾರೆ.

10. ಸದರಿ ಆರೋಪಿತರ ಪರ ವಕೀಲರು ತಮ್ಮ ಪ್ರತಿರಕ್ಷೆಗೆ ಪೂರಕವಾಗಿ ಮಾನ್ಯ ಉನ್ನತ ಹಾಗೂ ಸಂವಿಧಾನಿಕ ನ್ಯಾಯಾಲಯಗಳ ಈ ಕೆಳಕಂಡ ತೀರ್ಪುಗಳನ್ನು ಉಲ್ಲೇಖಿಸಿರುತ್ತಾರೆ.

1) 2022(2) KCCR 1277
2) 2019(3) KCCR 2473
3) 2024(3) KCCR 2198
4) 2024(4) KCCR 3283
5) ILR 2007 KAR 2709

6) 2015(2) DCR 737
7) 2020(1) DCR 436
8) 2009(1) DCR 385
9) 2020(3) DCR 409

ಈ ಪ್ರಕರಣದಲ್ಲಿ ಉಭಯ ಪಕ್ಷಗಾರರು ನೀಡಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲನೆ ಮಾಡಿ, ಆರೋಪಿತರ ಪರ ವಕೀಲರು ಹಾಜರುಪಡಿಸಿರುವ ಮೇಲಿನ ತೀರ್ಪುಗಳನ್ನು ಕೂಲಂಕುಷವಾಗಿ ಗಮನಿಸಲಾಗಿದೆ.

11. ಪಿರ್ಯಾದಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138 ರ ಅಡಿಯಲ್ಲಿ ಆರೋಪಿತರು ಅಪರಾಧ ಮಾಡಿದ್ದಾರೆ ಎಂಬುದಾಗಿ ಆಪಾದನೆ ಮಾಡಿರುವುದರಿಂದ, ಮೊದಲನೆಯದಾಗಿ, ಸದರಿ ಪಿರ್ಯಾದಿ ತನಗೆ ಕಾನೂನಾತ್ಮಕವಾಗಿ ಮರುಪಾವತಿ ಮಾಡಬೇಕಾದಂತಹ ಹಣವನ್ನು ನೀಡುವ ಭಾದ್ಯತೆಯ ಸಲುವಾಗಿ 1 ನೇ ಆರೋಪಿತನು ಚೆಕ್ಕನ್ನು ನೀಡಿದ್ದಾನೆ ಎಂಬುದನ್ನು ಮತ್ತು ತದನಂತರ, ಸದರಿ ಚೆಕ್ಕು ಅನಾಧಾರಣಗೊಂಡಿದೆ ಎಂಬುದನ್ನು ಸಾಬೀತುಪಡಿಸಬೇಕಾಗುತ್ತದೆ. ಈ ಪ್ರಕರಣದಲ್ಲಿ ಪಿರ್ಯಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತಾರೆ. ಹಾಗೂ ನಿ.ಪಿ.1 ರಿಂದ 7 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

12. ನಿ.ಪಿ.1 ಇದು 2 ನೇ ಆರೋಪಿತನಿಗೆ ಸೇರಿದ ಕರ್ನಾಟಕ ಬ್ಯಾಂಕ್, ಸಾಗರ ಶಾಖೆಯ ಚೆಕ್ ನಂ. 985454 ಆಗಿದ್ದು, ಅದನ್ನು 5,20,000/- ರೂ.ಗಳಿಗೆ ದಿನಾಂಕಃ 07.01.2020 ರಂದು ನಗದಾಗುವಂತೆ 1 ನೇ ಆರೋಪಿತನು ನೀಡಿದ್ದಾನೆ ಎಂಬುದನ್ನು ಸ್ವತಃ ಪಿರ್ಯಾದುದಾರರು ತಮ್ಮ ದೂರು ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದಾರೆ. ಸದರಿ ನಿ.ಪಿ.1 ರಲ್ಲಿನ ಚೆಕ್ಕನ್ನು ಆರೋಪಿತರು ನಿರ್ದಿಷ್ಟವಾಗಿ ಅಲ್ಲಗಳೆದಿದ್ದಾರೆ. ಪಿರ್ಯಾದಿಯೇ ಸ್ವತಃ ಹೇಳಿದಂತೆ, 1 ನೇ ಆರೋಪಿತನು 2 ನೇ ಆರೋಪಿತನ ಸಹಿಯನ್ನು ಸ್ವತಃ ಮಾಡಿ, ಪಿರ್ಯಾದಿಗೆ ನೀಡಿರುತ್ತಾರೆ. ಆದ್ದರಿಂದ, ನಿ.ಪಿ.1 ರಲ್ಲಿನ 2 ನೇ ಆರೋಪಿತನ ಸಹಿಯು ಸದರಿ ಆರೋಪಿತನು ತನ್ನ ಖಾತೆ ತೆರೆಯುವಾಗ ಬ್ಯಾಂಕಿನಲ್ಲಿ ನೀಡಿದ ಮಾದರಿ ಸಹಿಗೆ ತಾಳೆಯಾಗುವುದಿಲ್ಲವೆಂಬುದಾಗಿ, ನಿ.ಪಿ.2 ರಂತೆ ಸದರಿ ಚೆಕ್ಕನ್ನು ಬ್ಯಾಂಕಿನ ಅಧಿಕಾರಿಗಳು ಅನಾಧರಣಗೊಳಿಸಿ, ಹಿಂಬರಹವನ್ನು ನೀಡಿದ್ದಾರೆ.

13. ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138(ಎ) ನಂತೆ ಸದರಿ ನಿ.ಪಿ.1 ರ ಚೆಕ್ಕನ್ನು ನಿಗಧಿತ ಕಾಲಾವಧಿಯಲ್ಲಿ ಬ್ಯಾಂಕಿಗೆ ನಗಧೀಕರಣಕ್ಕಾಗಿ ಹಾಜರುಪಡಿಸಬೇಕಾಗುತ್ತದೆ. ಸದರಿ ಚೆಕ್ಕಿನಲ್ಲಿ ನಮೂದಿಸಿದಂತೆ ದಿನಾಂಕಃ 07.01.2020 ರಂದು ಪಿರ್ಯಾದಿಯು ಸಾಗರ ಶಾಖೆಯ ಕರ್ನಾಟಕ ಬ್ಯಾಂಕಿನ ತನ್ನ ಖಾತೆಗೆ ನಗಧೀಕರಣಕ್ಕಾಗಿ ಹಾಜರುಪಡಿಸಿದ್ದಾರೆ. ಆದ್ದರಿಂದ,

ಸದರಿ ಪಿರ್ಯಾದಿಯು ಕಲಂ 138(ಎ) ರ ಅಡಿಯಲ್ಲಿನ ಅವಶ್ಯಕತೆಯನ್ನು ಯಶಸ್ವಿಯಾಗಿ ಪೂರೈಸಿರುತ್ತಾರೆ.

14. ಸದರಿ ಕಾಯಿದೆಯ ಕಲಂ 138(ಬಿ) ರ ಅಡಿಯಲ್ಲಿ ಚೆಕ್ಕು ಅನಾಧರಣಗೊಂಡ ಕೂಡಲೇ 30 ದಿನಗಳ ಒಳಗಾಗಿ ಚೆಕ್ಕಿನ ಹಣವನ್ನು ಮರುಪಾವತಿಸುವಂತೆ ಸೂಚಿಸಿ, ಆರೋಪಿತರಿಗೆ ಪಿರ್ಯಾದಿಯು ನಿ.ಪಿ.3 ರಂತೆ ನೋಟೀಸ್ ನ್ನು ಸಹ ನೀಡಿರುತ್ತಾರೆ. ಸದರಿ ನೋಟೀಸು ನೀಡಿರುವ ಬಗ್ಗೆ ನಿ.ಪಿ.4 ಮತ್ತು 5 ರಂತೆ ಅಂಚೆ ರಶೀದಿಗಳನ್ನು ಪಿರ್ಯಾದುದಾರರು ತನ್ನ ಪರವಾಗಿ ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ. ನಿ.ಪಿ.6 ಮತ್ತು 7 ರಂತೆ ಪಿರ್ಯಾದುದಾರರು ತಮ್ಮ ವಕೀಲರಿಂದ ನೀಡಿದ ನೋಟೀಸು 1 ಮತ್ತು 2 ನೇ ಆರೋಪಿತರಿಗೆ ನಿಯಮಾನುಸಾರ ಜಾರಿಯಾಗಿರುತ್ತದೆ. ಆದ್ದರಿಂದ, ನೋಟೀಸು ಜಾರಿಯಾದ ಕೂಡಲೇ ನೋಟೀಸಿನಲ್ಲಿ ತಿಳಿಸಿದಂತೆ ಆರೋಪಿತರು ಸದರಿ ನೋಟೀಸಿಗೆ ಉತ್ತರವನ್ನು ನೀಡುವ ಅವಶ್ಯಕತೆ ಇದೆ. ಆದರೆ, ಈ ಪ್ರಕರಣದಲ್ಲಿ ಸದರಿ ನೋಟೀಸಿಗೆ ಆರೋಪಿತರು ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

15. ಮಾನ್ಯ ಆರೋಪಿ ಪರ ವಕೀಲರು ಅವಲಂಭಿಸಿರುವ ಗೌರವಾನ್ವಿತ ಕೇರಳ ಉಚ್ಚ ನ್ಯಾಯಾಲಯದ 2020(1) ಡಿ ಸಿ ಆರ್ 436 ರ ತೀರ್ಪಿನಲ್ಲಿ ಘನ ಉಚ್ಚ ನ್ಯಾಯಾಲಯವು,

> "**Mere failure of accused to reply to a statutory notice cannot tilt balance in favour of complainant–since complainant failed to state nature of debt or liability of accused alleged to be existed towards, him, accused is entitled to acquittal**." ಎಂದು ಅಭಿಪ್ರಾಯಪಟ್ಟಿರುತ್ತದೆ.

ಆದ್ದರಿಂದ, ಮೇಲಿನ ತೀರ್ಪಿನಂತೆ ಸದರಿ ನೋಟಿಸ್ಸಿಗೆ ಆರೋಪಿತರು ನಿಗದಿತ ಕಾಲಾವಧಿಯಲ್ಲಿ ಉತ್ತರವನ್ನು ನೀಡಿಲ್ಲ ಎಂಬ ಕಾರಣಕ್ಕಾಗಿ ಆರೂಪಿತರನ್ನು ಅಪರಾಧಿಗಳು ಎಂದು ತೀರ್ಮಾನಿಸಲು ಆಗುವುದಿಲ್ಲ. ಏಕೆಂದರೆ, ಕಾನೂನಾತ್ಮಕವಾಗಿ ಮರುಪಾವತಿ ಮಾಡಬೇಕಾದ ಹಣದ ಬಾಧ್ಯತೆಯ ಸಲುವಾಗಿ ಆರೋಪಿತರು ನಿ.ಪಿ.1ರ ಚೆಕ್ಕನ್ನು ಪಿರ್ಯಾದಿ ಪರ ನೀಡಿದ್ದಾರೆ ಎಂಬುದನ್ನು ಸಾಭೀತುಪಡಿಸುವ ಪ್ರಾಥಮಿಕ ಹೊಣೆಗಾರಿಕೆಯು ಪಿರ್ಯಾದಿಯ ಮೇಲೆಯೇ ಇದೆ. ಸದರಿ ನಿ.ಪಿ.3 ರ ನೋಟೀಸು ಆರೋಪಿತರಿಗೆ ನಿ.ಪಿ.6 ಮತ್ತು 7 ರಂತೆ ಜಾರಿಯಾದ ನಂತರ, ನಿಗದಿತ ಕಾಲಾವಧಿಯಲ್ಲಿ ಪ್ರಸ್ತುತ ದೂರನ್ನು ಪಿರ್ಯಾದುದಾರರು ನ್ಯಾಯಾಲಯದಲ್ಲಿ ಸಲ್ಲಿಸಲುತ್ತಾರೆ. ಆದ ಕಾರಣ, ಸದರಿ ಪಿರ್ಯಾದಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ 138ರ ಅಡಿಯಲ್ಲಿನ ಎಲ್ಲಾ ಅಗತ್ಯತೆಗಳನ್ನು ಪೂರೈಸಿರುವುದರಿಂದ ಮತ್ತು ಸದರಿ ದೂರನ್ನು ನಿಯಮಾನುಸಾರ ಕಾನೂನು ಅಗತ್ಯಪಡಿಸಿದಂತೆ ಹಾಜರುಪಡಿಸಿಲ್ಲ ಎಂಬುದಾಗಿ

ಆರೋಪಿತರು ಯಾವುದೇ ಪ್ರತಿರಕ್ಷೆಯನ್ನು ತೆಗೆದುಕೊಳ್ಳದೇ ಇರುವುದರಿಂದ, ಮತ್ತು ಸದರಿ ಕಾಯಿದೆಯ ಕಲಂ 139 ಮತ್ತು 118(A) ರಂತೆ ಪ್ರತಿಯೊಂದು ಲಿಖಿತ ಪತ್ರವು ಪ್ರತಿಫಲಕ್ಕಾಗಿ ನೀಡಿರುತ್ತಾರೆ ಎಂಬುದಾಗಿ ಪೂರ್ವಭಾವನೆಯನ್ನು ಮಾಡಬಹುದಾಗಿರುವುದರಿಂದ, ಈ ಪ್ರಕರಣದಲ್ಲಿಯೂ ಸಹ ಪಿರ್ಯಾದಿಯ ಪರವಾಗಿ ನ್ಯಾಯಾಲಯವು ಪೂರ್ವಭಾವನೆಯನ್ನು ಮಾಡಬಹುದಾಗಿರುತ್ತದೆ

16. ನಿ.ಪಿ.1 ರ ಚೆಕ್ಕು ಆರೋಪಿತನ ಸಹಿ ತಾಳೆಯಾಗುವುದಿಲ್ಲ ಎಂಬ ಕಾರಣಕ್ಕಾಗಿ ಅನಾಧರಣಗೊಂಡಿದೆಯೇ ಹೊರತು, ಬೇರೆ ಯಾವುದೇ ಕಾರಣಕ್ಕಾಗಿ ಅಲ್ಲ. ಆರೋಪಿತನ ಸಹಿಯ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ನೀಡಲು ಬ್ಯಾಂಕಿನ ಅಧಿಕಾರಿಗಳು ಸಕ್ಷಮರಾಗಿರುತ್ತಾರೆ. ಆದ ಕಾರಣ ಮೊದಲನೇಯದಾಗಿ, ನಿ.ಪಿ.1 ರಲ್ಲಿನ ಸಹಿಯು 2 ನೇ ಆರೋಪಿತನದ್ದಲ್ಲ ಎಂಬುದಾಗಿ, ಬ್ಯಾಂಕಿನ ಅಧಿಕಾರಿಗಳು ನಿ.ಪಿ.2 ರಂತೆ ಹಿಂಬರಹವನ್ನು ನೀಡಿರುವುದರಿಂದ, ಮೊದಲನೇಯದಾಗಿ, ಸದರಿ ಚೆಕ್ಕನ್ನು 2 ನೇ ಆರೋಪಿತನು ಪಿರ್ಯಾದುದಾರರ ಪರವಾಗಿ ನೀಡಿಲ್ಲ ಎಂಬುದಾಗಿ ಸಾಭೀತಾಗಿರುತ್ತದೆ. ಈ ಪ್ರಕರಣದಲ್ಲಿ ಪಿರ್ಯಾದಿಯು ಸಹ ಸ್ವತಃ 2 ನೇ ಆರೋಪಿತನಿಗೆ ಸೇರಿದ ನಿ.ಪಿ.1 ರ ಚೆಕ್ಕನ್ನು 1 ನೇ ಆರೋಪಿತನು ನೀಡಿದ್ದಾನೆ ಎಂಬುದಾಗಿ ಹೇಳಿರುತ್ತಾರೆ. ಆದ್ದರಿಂದ, ಸದರಿ ಚಕ್ಕಿನ ಧಾರಕನಾದ 2 ನೇ ಆರೋಪಿತನು ಪಿರ್ಯಾದುದಾರರಿಗೆ ನಿ.ಪಿ.1 ರ ಚೆಕ್ಕನ್ನು ನೀಡಿಲ್ಲ ಎಂದಾದರೆ, ಸದರಿ ಚೆಕ್ಕನ್ನು 1 ನೇ ಆರೋಪಿತನು 2 ನೇ

ಆರೋಪಿತನ ಪರವಾಗಿ ನೀಡಲು ಅವಕಾಶವಿರುವುದಿಲ್ಲ. ಆದ ಕಾರಣ, ಸದರಿ ಆರೋಪಿತರ ವಿರುದ್ಧ ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆ ಕಲಂ 138 ರ. ಅಪರಾಧವು ಸಾಭೀತಾಗುವುದಿಲ್ಲ .

17. ಈ ಪ್ರಕರಣದಲ್ಲಿ ಪಿರ್ಯಾದುದಾರರ ಆರ್ಥಿಕ ಸಾಮರ್ಥ್ಯವನ್ನು ಆರೋಪಿತರು ತಮ್ಮ ಪಾಟೀ ಸವಾಲಿನಲ್ಲಿ ನಿರ್ದಿಷ್ಟವಾಗಿ ಪ್ರಶ್ನಿಸಿರುತ್ತಾರೆ. ಆದಕಾರಣ, ಸದರಿ ಪಿರ್ಯಾದಿಯು ತನ್ನ ದೂರಿನಲ್ಲಿ ಹೇಳಿದಂತೆ, ರೂ.5,20,000 (ಐದು ಲಕ್ಷ ಇಪ್ಪತ್ತು ಸಾವಿರ) ರೂಗಳನ್ನು 1 ನೇ ಆರೋಪಿತನಿಗೆ ಸಾಲವಾಗಿ ನೀಡುವಷ್ಟು ಆರ್ಥಿಕ ಸಾಮರ್ಥ್ಯ ತನಗೆ ಇತ್ತು ಎಂಬುದನ್ನು ಸಾಭೀತುಪಡಿಸುವ ಹೊಣೆಗಾರಿಕೆಯು ಪಿರ್ಯಾದಿಯ ಮೇಲೆಯೇ ಇದೆ. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಆರೋಪಿತರ ಪರವಾಗಿ ಅವಲಂಬಿಸಿರುವ **2019(3) ಕೆಸಿಸಿಆರ್ 2473 (ಎಸ್ ಸಿ) ಬಸಲಿಂಗಪ್ಪ ವಿರುದ್ಧ ಮುದಿಬಸಪ್ಪ** ತೀರ್ಪಿನಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು,

> **"Complainant making contradictory statements in proving his financial capacity to lend money - Accused raising probable defence–Trial Court holding that complainant failed to prove his financial capacity and proceeding to acquit accused–The observations of the High**

Court holding that findings of trial Court were perverse" ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಆರೋಪಿತರು ಪಿರ್ಯಾದಿಯ ಆರ್ಥಿಕ ಸಾಮರ್ಥ್ಯದ ಕುರಿತು ನಿರ್ದಿಷ್ಟವಾದ ಪ್ರತಿಕ್ರೈಯನ್ನು ತೆಗೆದುಕೊಂಡು, ಪಿಡ್ಲ್ಯೂ 1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ ಸಂದರ್ಭದಲ್ಲಿ, ಪಿರ್ಯಾದಿಯು ತನಗೆ ಸಾಗರದ ಶ್ರೀ ಟಾಕೀಸ್ ರಸ್ತೆಯಲ್ಲಿ 2 ಬಟ್ಟೆ ಅಂಗಡಿಗಳು ಇವೆ ಎಂದು ಹಾಗೂ ಸದರಿ ಬಟ್ಟೆ ಅಂಗಡಿಯಿಂದ ತನಗೆ 50 ರಿಂದ 75 ಸಾವಿರ ಆದಾಯ ಇದೆ ಎಂದು ಹೇಳಿದ್ದಾರೆ. ಸದರಿ ಬಟ್ಟೆ ಅಂಗಡಿ ಇರುವ ಕುರಿತು ಪಿರ್ಯಾದಿಯು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೆ, ಸದರಿ ಪಿಡಬ್ಲ್ಯೂ1 ರವರು ತಮ್ಮ ಪಾಟೀ ಸವಾಲಿನ 5 ನೇ ಪುಟದ 3 ನೇ ಖಂಡಿಕೆಯಲ್ಲಿ,

> **"ನಮ್ಮ ತಂದೆಯ ಜಾಗದಲ್ಲಿ ನಾನು ಮತ್ತು ನನ್ನ ಸಹೋದರ ಅಂಗಡಿಗಳನ್ನು ನಡೆಸುತ್ತಿದ್ದೇವೆ. ನನ್ನ ಅಂಗಡಿಯ ಮೇಲೆ ವಾಸವಿ ಕೋ–ಆಪರೇಟಿವ್ ಸೊಸೈಟಿಯಲ್ಲಿ 2017 ನೇ ಸಾಲಿನಲ್ಲಿ 6 ಲಕ್ಷ ಸಾಲವನ್ನು ಪಡೆದಿದ್ದೇನೆ. ಸದರಿ ಸಾಲವನ್ನು 2022–23 ರಲ್ಲಿ ಸಂಪೂರ್ಣವಾಗಿ ಮರುಪಾವತಿ ಮಾಡಿದ್ದೇನೆ"** ಎಂದು ಹೇಳಿಕೆ ನೀಡಿದ್ದಾರೆ.

ಸದರಿ ಹೇಳಿಕೆಯಿಂದ ಸ್ಪಷ್ಟವಾಗುವುದೇನೆಂದರೆ, 2019 ನೇ ಸಾಲಿನ ನವೆಂಬರ್ ತಿಂಗಳ ಮೊದಲನೇ ವಾರದಲ್ಲಿ ರೂ.5,20,000/– (ಐದು ಲಕ್ಷ ಇಪ್ಪತ್ತು ಸಾವಿರ) ರೂಗಳನ್ನು 1 ನೇ ಆರೋಪಿತನಿಗೆ ಪಿರ್ಯಾದಿಯು ಸಾಲವಾಗಿ

ನೀಡಿದ್ದಾನೆ. ಮೇಲಿನಂತೆ ಸ್ವತಃ ಪಿಡಬ್ಲ್ಯೂ 1 ರವರು ಒಪ್ಪಿಕೊಂಡಂತೆ, 2017 ನೇ ಸಾಲಿನಲ್ಲಿ ಪಡೆದುಕೊಂಡ ರೂ.6,00,000/- (ಆರು ಲಕ್ಷ) ರೂಗಳ ಸಾಲವನ್ನು ಪಿರ್ಯಾದಿಯು 2022-23 ನೇ ಸಾಲಿನವರೆಗೆ ಮರುಪಾವತಿ ಮಾಡಿದ್ದಾರೆ. ಅಂದರೆ 2019 ನೇ ಸಾಲಿನಲ್ಲಿ ಪಿರ್ಯಾದಿಯು 1 ನೇ ಆರೋಪಿತನಿಗೆ ಸಾಲವನ್ನು ನೀಡಿದ್ದೇನೆ ಎಂದು ಹೇಳುವ ಕಾಲಕ್ಕೆ ಸದರಿ ಪಿರ್ಯಾದಿಯು ಸ್ವತಃ ಸಾಲಗಾರನಾಗಿದ್ದನು ಎಂಬುದು ಕಂಡುಬರುತ್ತದೆ.

18. ಸ್ವತಃ ಪಿರ್ಯಾದಿಯೇ ಸಾಲಗಾರನಾಗಿರುವಾಗ, ರೂ.5,20,000/- (ಐದು ಲಕ್ಷ ಇಪ್ಪತ್ತು ಸಾವಿರ) ರೂಗಳನ್ನು 1 ನೇ ಆರೋಪಿತನಿಗೆ ಹೇಗೆ ಕೊಡಲು ಸಾಧ್ಯ? ಅಲ್ಲದೆ, ಸದರಿ 1 ನೇ ಆರೋಪಿತನಿಗೆ ಪಿರ್ಯಾದಿಯು ನೀಡಿದ್ದೇನೆ ಎನ್ನುವ ರೂ.5,20,000/- (ಐದು ಲಕ್ಷ ಇಪ್ಪತ್ತು ಸಾವಿರ) ರೂಗಳ ಸಾಲವು ಬಡ್ಡಿ ರಹಿತವಾಗಿರುತ್ತದೆ. ಪಿರ್ಯಾದಿಯು ವಾಸವಿ ಕೋ-ಆಪರೇಟಿವ್ ಸೊಸೈಟಿಯಲ್ಲಿ 2017 ನೇ ಸಾಲಿನಲ್ಲಿ ಪಡೆದುಕೊಂಡ ಸಾಲಕ್ಕೆ ಬ್ಯಾಂಕಿನವರು ಸ್ವತಃ ಬಡ್ಡಿಯನ್ನು ವಿಧಿಸುತ್ತಾರೆ. ಹಾಗಿದ್ದರೆ, ಪಿರ್ಯಾದಿಯು 1 ನೇ ಆರೋಪಿತನಿಗೆ ಸಾಲವನ್ನು ಬಡ್ಡಿ ರಹಿತವಾಗಿ ಕೊಡಲು ಸಾಧ್ಯವಿಲ್ಲ. ಅದೂಅಲ್ಲದೆ, ತಾನೇ ಸ್ವತಃ ಸಾಲಗಾರನಾಗಿರುವಾಗ, 1 ನೇ ಆರೋಪಿತನಿಗೆ ಸಾಲವನ್ನು ಕೊಡುವ ಸಾಮರ್ಥ್ಯವೇ ಪಿರ್ಯಾದಿಗೆ ಇರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದಕಾರಣ, ಮೇಲಿನ ತೀರ್ಪಿನಂತೆ ಸದರಿ ಪಿರ್ಯಾದಿಯು 1 ನೇ

ಆರೋಪಿತನಿಗೆ ಸಾಲವನ್ನು ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಹೊಂದಿಲ್ಲವೆಂಬುದು ಸ್ಪಷ್ಟವಾಗುತ್ತದೆ.

19. ಅದೇ ರೀತಿಯಾಗಿ, ಸದರಿ ಪಾಟೀ ಸವಾಲಿನ 6 ನೇ ಪುಟದ 4 ನೇ ಖಂಡಿಕೆಯ 4 ನೇ ಸಾಲಿನಲ್ಲಿ,

> "**ರೂ.5,20,000/- (ಐದು ಲಕ್ಷ ಇಪ್ಪತ್ತು ಸಾವಿರ) ಹಣ ಇತ್ತು ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇಲ್ಲ ಎಂದರೆ ಸರಿ**" ಎಂದು ಒಪ್ಪಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಆರೋಪಿ ಪರ ವಕೀಲರು ಅವಲಂಬಿಸಿರುವ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ 2024(3) **ಕೆ.ಸಿ.ಸಿ.ಆರ್** 2198 ರ ತೀರ್ಪಿನಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು,

> "**Complainant, being a homemaker, having no avocation - Not producing any documents to show her income- Defence of accused that complainant has no capacity to lend money-Upheld**" ಎಂದು ಅಭಿಪ್ರಾಯಪಟ್ಟಿರುತ್ತದೆ.

ಆದ್ದರಿಂದ, ಸದರಿ 1 ನೇ ಆರೋಪಿತನಿಗೆ ಪಿರ್ಯಾದಿಯು ರೂ.5,20,000/- (ಐದು ಲಕ್ಷ ಇಪ್ಪತ್ತು ಸಾವಿರ) ರೂಗಳನ್ನು ಸಲವಾಗಿ ನೀಡುವ ಸಾಮರ್ಥ್ಯವನ್ನು ಹೊಂದಿಲ್ಲ ಮತ್ತು ಆರೋಪಿತರಿಂದ

ಕಾನೂನಾತ್ಮಕವಾಗಿ ವಸೂಲಿ ಮಾಡುವಂತಹ ಯಾವುದೇ ಹೊಣೆಗಾರಿಕೆಯು ಇರುವುದಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ.

20. ಪಿರ್ಯಾದುದಾರರ ಪರವಾಗಿ ಇರುವಂತಹ ಪೂರ್ವಭಾವನೆಯನ್ನು ಖಂಡಿಸಲು ಆರೋಪಿತನು ಕಟ್ಟಕಟ್ಟೆಗೆ ಬರಬೇಕು ಎನ್ನುವ ಕಡ್ಡಾಯ ನಿಯಮ ಇರುವುದಿಲ್ಲ. ಪಿರ್ಯಾದುದಾರರ ಪಾಟೀ ಸವಾಲಿನಲ್ಲಿಯೂ ಸಹ ಆರೋಪಿತರು ತಮ್ಮ ಪ್ರತಿರಕ್ಷೆಯನ್ನು ಸಿದ್ಧಪಡಿಸಬಹುದಾಗಿರುತ್ತದೆ. ಈ ಸಂದರ್ಭದಲ್ಲಿ ಆರೋಪಿ ಪರ ವಕೀಲರು ಅವಲಂಬಿಸಿರುವ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ **ಐ.ಎಲ್.ಆರ್**. 2007 **ಕೆ ಎ ಆರ್** 279 ನ ತೀರ್ಪಿನಲ್ಲಿ,

> "**That the presumption under Section** 139 **of the Act need not be rebutted only by leading defence evidence and the said presumption can be rebutted even on the basis of the facts elicited in the cross–examination of the complainant as has been done in the present case – Judgment of acquittal is justified**" ಎಂದು ಅಭಿಪ್ರಾಯಪಟ್ಟಿರುತ್ತದೆ.

ಈ ಪ್ರಕರಣದಲ್ಲಿ ಸದರಿ ಆರೋಪಿತರು ತಮ್ಮ ಪ್ರತಿರಕ್ಷೆಗೆ ಪೂರಕವಾಗಿ ತಮ್ಮ–ತಮ್ಮ ಮುಖ್ಯ ವಿಚಾರಣಾ ಹೇಳಿಕೆಗಳಲ್ಲಿ ನ್ಯಾಯಾಲಯದ ಮುಂದೆ

ಪ್ರಮಾಣಪೂರ್ವಕವಾಗಿ ಸಾಕ್ಷಿಯನ್ನು ನುಡಿಯುತ್ತಾ, ತಾವು ಪಿರ್ಯಾದಿಯೊಂದಿಗೆ ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ. ನಿ.ಪಿ.1 ರಲ್ಲಿನ ಸಹಿಯು ತಮ್ಮದಾಗಿರುವುದಿಲ್ಲ ಮತ್ತು ಪಿರ್ಯಾದಿಗೆ ರೂ.5,20,000/- (ಐದು ಲಕ್ಷ ಇಪ್ಪತ್ತು ಸಾವಿರ) ರೂಗಳನ್ನು ಸಾಲವಾಗಿ ನೀಡುವಷ್ಟು ಆರ್ಥಿಕ ಸಮರ್ಥ್ಯ ಇರುವುದಿಲ್ಲ ಎಂಬುದಾಗಿ ನಿರ್ದಿಷ್ಟ ಪ್ರತಿರಕ್ಷೆಯನ್ನು ತೆಗೆದುಕೊಂಡಿದ್ದಾರೆ. ಸದರಿ ಡಿ.ಡಬ್ಲ್ಯೂ 1 ಮತ್ತು 2 ರವರನ್ನು ಸಾಕಷ್ಟು ಕಾಲಾವಕಾಶವನ್ನು ನೀಡಿದ ನಂತರವೂ ಸಹ, ಪಿರ್ಯಾದಿಯು ಪಾಟೀ ಸವಾಲಿಗೆ ಒಳಪಡಿಸಿರುವುದಿಲ್ಲ. ಆದಕಾರಣ, ಸದರಿ ಆರೋಪಿತರ ಸಾಕ್ಷ್ಯವು ಸೂಕ್ತ ರೀತಿಯಲ್ಲಿ ಖಂಡಿಸದೇ ಇರುವುದರಿಂದ, ಪರೋಕ್ಷವಾಗಿ ಪಿರ್ಯಾದಿಯು ಆರೋಪಿತರ ಪ್ರತಿರೀಕ್ಷೆಯನ್ನು ಒಪ್ಪಿಕೊಂಡಿರುತ್ತಾರೆ. ಈ ಕಾರಣಗಳಿಂದಾಗಿ ಸದರಿ ಪಿರ್ಯಾದಿಯ ಪರವಾಗಿ ಇರುವಂತಹ ಪೂರ್ವಭಾವನೆಯನ್ನು ಆರೋಪಿತರು ಯಶಸ್ವಿಯಾಗಿ, ಪ್ರತಿರಕ್ಷೆ ಸಾಕ್ಷಿಯನ್ನು ನೀಡುವ ಮೂಲಕ ಹಾಗೂ ಪಿಡಬ್ಲ್ಯೂ 1 ರವರ ಪಾಟೀ ಸವಾಲಿನ ಮೂಲಕ ಖಂಡಿಸಿದ್ದಾರೆ.

21. ನಿ.ಪಿ.1 ಚೆಕ್ಕು ನಿ.ಪಿ.2 ರಂತೆ ಅನಾಧರಣಗೊಂಡಿರುತ್ತದೆ. ಅದೇ ರೀತಿಯಾಗಿ, ನಿ.ಪಿ.1 ರಲ್ಲಿ ಕಾಣಿಸಿದ ರೂ.5,20,000/- (ಐದು ಲಕ್ಷ ಇಪ್ಪತ್ತು ಸಾವಿರ) ಹಣವನ್ನು ಮರುಪಾವತಿ ಮಾಡುವಂತೆ ಸೂಚಿಸಿ, ನಿ.ಪಿ.3 ರಂತೆ ಪಿರ್ಯಾದಿಯು ಆರೋಪಿತರಿಗೆ ನೋಟಿಸ್ಸನ್ನು ನೀಡಿದ್ದಾರೆ. ನಂತರ ಸದರಿ ನೋಟಿಸಿಗೆ

ಆರೋಪಿತರು ಉತ್ತರವನ್ನು ನೀಡಿರುವುದಿಲ್ಲ. ದೂರನ್ನು ಸಹ ಪಿರ್ಯಾದಿಯು ನಿಗದಿತ ಕಾಲಾವಧಿಯಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ. ಆದರೆ, ಆರೋಪಿತರು ತಮ್ಮ ಪ್ರತಿರಕ್ಷೆಯ ಮೂಲಕ ಪಿರ್ಯಾದಿಯ ಪರವಾಗಿ ಇರುವಂತಹ ಪೂರ್ವಭಾವನೆಯನ್ನು ಸೂಕ್ತ ರೀತಿಯಲ್ಲಿ ಖಂಡಿಸಿರುತ್ತಾರೆ. ಆದ್ದರಿಂದ, ಆರೋಪಿತರು ಪಿರ್ಯಾದುದಾರರಿಗೆ ಕಾನೂನಾತ್ಮಕವಾಗಿ ಮರುಪಾವತಿ ಮಾಡಬೇಕಾದಂತಹ ಯಾವುದೇ ಸಾಲದ ಭಾಧ್ಯತೆಯನ್ನು ಹೊಂದಿಲ್ಲ ಎಂಬುದಾಗಿ ನ್ಯಾಯಾಲಯವು ಅಭಿಪ್ರಾಯಪಟ್ಟು, ಮೇಲಿನ **ಅಂಶ 1 ಮತ್ತು 4 ನ್ನು ನಕಾರಾತ್ಮಕವಾಗಿ ಹಾಗೂ ಅಂಶ 2 ಮತ್ತು 3 ನ್ನು ಸಕಾರಾತ್ಮಕವಾಗಿ** ಉತ್ತರಿಸುತ್ತದೆ.

22. **ಅಂಶ–5**:– ಮೇಲಿನ ಅಂಶ 1 ರಿಂದ 4 ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆಃ

ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ ಕಾಯಿದೆಯ ಕಲಂ 255(1) ರಡಿಯಲ್ಲಿ ನೀಡಿರುವ ಅಧಿಕಾರವನ್ನು ಚಲಾಯಿಸಿ, ಆರೋಪಿತರ ವಿರುದ್ಧ ಪಿರ್ಯಾದಿಯು ಆಪಾದಿಸಿರುವ ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆ 138 ರ ಅಡಿಯಲ್ಲಿನ ಆರೋಪದಿಂದ ಆರೋಪಿತರನ್ನು ನಿರ್ದೋಷಿಗಳು ಎಂಬುದಾಗಿ ತೀರ್ಮಾನಿಸಿ ಖುಲಾಸೆಗೊಳಿಸಲಾಗಿದೆ.

ಆರೋಪಿತರು ಮತ್ತು ಅವರ ಪರ ಜಮೀನುದಾರರು ಬರೆದುಕೊಟ್ಟಿರುವ ಜಮೀನು ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ನಂತೆ ಮುಂದಿನ 6 ತಿಂಗಳವರೆಗೆ ಜಾರಿಯಲ್ಲಿರುತ್ತವೆ.

(ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ, ನಂತರ ಅದನ್ನು ಓದಿ, ತಪ್ಪುಗಳನ್ನು ತಿದ್ದುಪಡಿಮಾಡಿ, ಈ ದಿನ ಅಂದರೆ, ದಿನಾಂಕಃ 4 ನೇ ಆಗಸ್ಟ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

(ಮಾದೇಶ ಎಂ.ವಿ.,)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಸಾಗರ.

ಅನುಬಂಧ

1. ಪಿರ್ಯಾದುದಾರರ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿಃ

ಪಿ.ಡಬ್ಲೂ–1	ವರುಣ್ ಡಿ.ಎಲ್.

2. ಪಿರ್ಯಾದುದಾರರ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿಃ

ನಿ.ಪಿ.1	ಅಸಲು ಚೆಕ್ಕು
ನಿ.ಪಿ.2	ಹಿಂಬರಹ.
ನಿ.ಪಿ.3	ಕಾನೂನುಬದ್ಧ ನೋಟೀಸು.
ನಿ.ಪಿ.4 ಮತ್ತು 5	ಎರಡು ಅಂಚೆ ರಶೀದಿಗಳು.

ನಿ.ಪಿ.6 ಮತ್ತು 7	ಅಂಚೆ ಸ್ವೀಕೃತಿಗಳು.

3. ಆರೋಪಿಯ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿಃ

ಡಿ.ಡಬ್ಲ್ಯೂ.1	ವೀರೇಂದ್ರ.
ಡಿ.ಡಬ್ಲ್ಯೂ. 2	ಅಣ್ಣಪ್ಪ.

4. ಆರೋಪಿಯ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿಃ

– ಏನೂ ಇಲ್ಲ –

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ.,ಸಾಗರ.